ಜಿಲ್ಲಾ ಪಂಚಾಯ್ತಿಗಳ ಆದಾಯ ವೆಚ್ಚದ ಮಾಹಿತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1083( 1310)

**ಸದಸ್ಯರ ಹೆಸರು: ಶ್ರೀ ಬಿಲ್ಲದ್ ಚಂದ್ರಕಾಂತ್ ಗುರಪ್ಪ(ಧಾರವಾಡ)**

**ಉತ್ತರಿಸುವ ಸಚಿವರು: ಶ್ರೀ ಎಂ.ವೈ.ಘೋರ್ಪಡೆ(ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು)**

## ಪ್ರಶ್ನೆ

ಅ. ರಾಜ್ಯದಲ್ಲಿರುವ ಜಿಲ್ಲಾ ಪಂಚಾಯ್ತಿಗಳು 2000-2001ರಲ್ಲಿ ಗಳಿಸಿದ ಆದಾಯ ಮಾಡಿದ ವೆಚ್ಚ ಹಾಗೂ ವೆಚ್ಚ ಮಾಡದೆ ಉಳಿಸಿದ ಹಣ ಎಷ್ಟು? (31.12-2001ರ ಅಂತ್ಯದವರೆಗೆ ವಿವರ ನೀಡುವುದು)

ಆ. ರಾಜ್ಯದ 175 ತಾಲ್ಲೂಕು ಪಂಚಾಯ್ತಿಗಳು ಮೇಲ್ಕಂಡ ಅವಧಿಯಲ್ಲಿ ಗಳಿಸಿದ ಆದಾಯ ಮತ್ತು ಮಾಡಿದ ವೆಚ್ಚ ಹಾಗೂ ವೆಚ್ಚವಾಗದೆ ಉಳಿದಿರುವ ಹಣ ಎಷ್ಟು?

ಇ. ಜಿಲ್ಲಾವಾರು ಗ್ರಾಮ ಪಂಚಾಯ್ತಿಗಳು ಒಟ್ಟಾರೆ ಪಡೆದ ಆದಾಯ, ಮಾಡಿದ ವೆಚ್ಚ, ವೆಚ್ಚ ಮಾಡದೆ ಉಳಿಸಿದ ಮೊತ್ತ ಎಷ್ಟು? ಪೂರ್ಣ ವಿವರ ನೀಡಿ?

## ಉತ್ತರ

ಅ. ರಾಜ್ಯದಲ್ಲಿರುವ ಜಿಲ್ಲಾ ಪಂಚಾಯತ್‌ಗಳಿಗೆ 2000-2001ರಲ್ಲಿ ಸರ್ಕಾರದಿಂದ ರೂ. 1949.43 ಕೋಟಿ ನೀಡಲಾಗಿದೆ. ಅದರಲ್ಲಿ ರೂ. 1867.67 ಕೋಟಿ ವೆಚ್ಚ ಮಾಡಲಾಗಿದೆ. 31-3-2001ರ ಅಂತ್ಯಕ್ಕೆ ವೆಚ್ಚವಾಗದೆ ಉಳಿದ ಹಣ ರೂ. 81.76 ಕೋಟಿ.

ಆ. ರಾಜ್ಯದ 175 ತಾಲ್ಲೂಕು ಪಂಚಾಯ್ತಿಗಳಿಗೆ ಮೇಲ್ಕಂಡ ಅವಧಿಯಲ್ಲಿ ರೂ. 2487.14 ಕೋಟಿ ನೀಡಲಾಗಿದೆ. ಅದರಲ್ಲಿ ರೂ. 2382.83 ಕೋಟಿ ವೆಚ್ಚ ಮಾಡಲಾಗಿದೆ. 31-3-2001ರ ಅಂತ್ಯಕ್ಕೆ ವೆಚ್ಚವಾಗದೆ ಉಳಿದ ಹಣ ರೂ. 104.31 ಕೋಟಿ.

ಇ. ಗ್ರಾಮ ಪಂಚಾಯಿತಿಗಳಿಗೆ ಸರಕಾರದಿಂದ 2000-2001ರಲ್ಲಿ ನೀಡಿದ ಅನುದಾನ ರೂ. 250.75 ಕೋಟಿ ಅದರಲ್ಲಿ ರೂ. 240.92 ಕೋಟಿ ವೆಚ್ಚ ಮಾಡಲಾಗಿದೆ. 31-3-2001ರ ಅಂತ್ಯಕ್ಕೆ ವೆಚ್ಚವಾಗದೆ ಉಳಿದ ಮೊತ್ತ ರೂ. 9.83 ಕೋಟಿ (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ)

ಅನುಬಂಧ

2000-2001ನೇ ಸಾಲಿನಲ್ಲಿ ಜಿಲ್ಲಾವಾರು ಗ್ರಾಮ ಪಂಚಾಯತಿಗಳು ಒಟ್ಟಾರೆ ಪಡೆದ ಆದಾಯ ಮಾಡಿದ ವೆಚ್ಚ, ವೆಚ್ಚ ಮಾಡದೆ ಉಳಿಸಿದ ಮೊತ್ತದ ವಿವರಗಳು

(ರೂ. ಕೋಟಿಗಳಲ್ಲಿ)

| ಕ್ರಮ ಸಂಖ್ಯೆ | ಜಿಲ್ಲಾ ಪಂಚಾಯತಿ ಹೆಸರು | 2000-01ನೇ ಸಾಲಿನಲ್ಲಿ ನೀಡಿದ ಅನುದಾನ | 2000-01ನೇ ಸಾಲಿನಲ್ಲಿನ ವೆಚ್ಚ | ವೆಚ್ಚವಾಗದೆ ಉಳಿದ ಮೊತ್ತ |
|---|---|---|---|---|
| 1 | ಬೆಂಗಳೂರು(ನಗರ) | 6.3335 | 6.3335 | 0.0000 |
| 2 | ಬೆಂಗಳೂರು(ಗ್ರಾ) | 12.0306 | 12.0306 | 0.0000 |
| 3 | ಬೆಳಗಾಂ | 17.7297 | 16.3837 | 1.3460 |
| 4 | ಬಳ್ಳಾರಿ | 10.0076 | 9.3328 | 0.6748 |
| 5 | ಬೀದರ್ | 8.3391 | 7.7181 | 0.6210 |
| 6 | ಬಿಜಾಪುರ | 8.3673 | 8.3673 | 0.0000 |
| 7 | ಚಿಕ್ಕಮಗಳೂರು | 7.3863 | 7.0535 | 0.3328 |
| 8 | ಚಿತ್ರದುರ್ಗ | 10.0116 | 10.0116 | 0.0000 |
| 9 | ಮಂಗಳೂರು | 6.7298 | 6.72.98 | 0.0000 |
| 10 | ಧಾರವಾಡ | 4.9992 | 4.5042 | 0.4950 |
| 11 | ಗುಲ್ಬರ್ಗಾ | 12.9385 | 12.9384 | 0.0001 |
| 12 | ಹಾಸನ | 13.9062 | 13.2899 | 0.6163 |
| 13 | ಮಡಿಕೇರಿ | 5.4364 | 5.43.54 | 0.0000 |
| 14 | ಕೋಲಾರ | 15.8140 | 15.7364 | 0.0776 |

| | | | | |
|---|---|---|---|---|
| 15 | ಮಂಡ್ಯ | 10.9719 | 109719 | 0.0000 |
| 16 | ಮೈಸೂರು | 10.6493 | 8.5305 | 2.1188 |
| 17 | ರಾಯಚೂರು | 8.9327 | 7.9482 | 0.9845 |
| 18 | ಶಿವಮೊಗ್ಗ | 9.5526 | 9.5526 | 0.0000 |
| 19 | ತುಮಕೂರು | 15.3613 | 14.3400 | 1.0213 |
| 20 | ಉತ್ತರ ಕನ್ನಡ | 6.8114 | 6.9021 | -0.0907 |
| 21 | ಬಾಗಲಕೋಟೆ | 7.5362 | 7.3872 | 0.1490 |
| 22 | ಚಾಮರಾಜನಗರ | 6.9162 | 5.8698 | 1.0464 |
| 23 | ದಾವಣಗೆರೆ | 10.9296 | 10.9296 | 0.0000 |
| 24 | ಗದಗ | 4.2812 | 4.2812 | 0.0000 |
| 25 | ಹಾವೇರಿ | 7.0518 | 7.0518 | 0.0000 |
| 26 | ಕೊಪ್ಪಳ | 5.5632 | 5.5632 | 0.0000 |
| 27 | ಉಡುಪಿ | 6.1646 | 5.7281 | 0.4365 |
| | ಒಟ್ಟು | 250.7518 | 240.9224 | 9.8294 |